# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ತುಮಕೂರು ಶಿರಾ ಪಟ್ಟಣದ ಸಮಗ್ರಾಭಿವೃದ್ಧಿ ಯೋಜನೆಗೆ ಸರ್ಕಾರದ ಅಂತಿಮ ಅನುಮೋದನೆಯನ್ನು ನೀಡುವ ಬಗ್ಗೆ.

— — —

ಓದಲಾಗಿದೆ:
1. ಆದೇಶ ಸಂಖ್ಯೆ: ನಅಇ 20(ಬ) ,ಬೆಂಯೋಪ್ರಾ 2003 , ದಿ: 4-2-2003
2. ಮುಖ್ಯಾಧಿಕಾರಿ, ಪುರ ಸಭೆ, ಸ್ಥಳೀಯ ಯೋಜನಾ ಪ್ರಾಧಿಕಾರ, ಶಿರಾ ಇವರ ಪತ್ರ ಸಂಖ್ಯೆ: ಪಿಯುಎನ್ (ಸ್ಥಯೋಪ್ರಾ) ಸಮಗ್ರ: 101:2004-05, ದಿನಾಂಕ: 24-7-2004.
3. ನಿರ್ದೇಶಕರು, ನಗರ ಯೋಜನಾ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ನಯೋ(21):ಶಿರಾ:ಸಮಗ್ರಅಯೋ:ಅಲ 171: 2004-05, ದಿನಾಂಕ: 11-8-05.

ಪ್ರಸ್ತಾವನೆ:

ತುಮಕೂರು ಜಿಲ್ಲೆ, ಶಿರಾ ಪಟ್ಟಣದ ಸ್ಥಳೀಯ ಯೋಜನಾ ಪ್ರಾಧಿಕಾರವು ಸಮಗ್ರಾಭಿವೃದ್ಧಿ ಯೋಜನೆಗೆ ಓದಲಾದ (1)ರ ಆದೇಶದಲ್ಲಿ ತಾತ್ಕಾಲಿಕ ಅನುಮೋದನೆ ನೀಡಿದೆ.

ಮೇಲೆ ಓದಲಾದ (2)ರ ಪ್ರಸ್ತಾವನೆಯಲ್ಲಿ ತುಮಕೂರು ಜಿಲ್ಲೆ, ಶಿರಾ ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿರುವ ಅಂತಿಮ ಸಮಗ್ರಾಭಿವೃದ್ಧಿ ಯೋಜನೆಯ ನಕ್ಷೆ ಮತ್ತು ವರದಿಯನ್ನು ತಯಾರಿಸಿರುತ್ತಾರೆ.

ಮೇಲೆ ಓದಲಾದ (3)ರ ಪ್ರಸ್ತಾವನೆಯಲ್ಲಿ, ನಿರ್ದೇಶಕರು, ನಗರ ಯೋಜನಾ ಇಲಾಖೆಯವರು ಈ ಪಟ್ಟಣದ ಜನಸಂಖ್ಯೆ 50056 ಇದ್ದು, 20 ವರ್ಷಗಳ ಯೋಜನಾ ಅವಧಿಗೆ ಅಂದರೆ 2021ನೇ ಇಸವಿಗೆ ಪಟ್ಟಣದ ಜನಸಂಖ್ಯೆ 1,12,000 ಆಗಬಹುದು ಎಂದು ಸಮಗ್ರಾಭಿವೃದ್ಧಿ ಯೋಜನೆಯನ್ನು ತಯಾರಿಸಿದೆ. ಸ್ಥಳೀಯ ಯೋಜನಾ ಪ್ರದೇಶದ ವಿಸ್ತೀರ್ಣ 15.3 ಚ.ಕಿ.ಮೀ. ಹಾಗೂ ಪ್ರಸ್ತಾವಿತ ನಗರೀಕರಣದ ವಿಸ್ತೀರ್ಣವು 8.93 ಚ.ಕಿ.ಮೀ. ಇರುತ್ತದೆ. ಶಿರಾ ಪಟ್ಟಣದ ಆರ್ಥಿಕ, ಸಾಮಾಜಿಕ ರಸ್ತೆಗಳ ಪರಿಚಲನಾ ವ್ಯವಸ್ಥೆ, ಹವಾಗುಣ, ಇತರೇ ಸಮಸ್ಯೆಗಳನ್ನು ಯೋಜನಾ ತತ್ವಗಳನ್ನು ಆಧರಿಸಿ ಮತ್ತು ಸಮಗ್ರಾಭಿವೃದ್ಧಿ ಯೋಜನೆ ತಯಾರಿಕೆ ಬಗ್ಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಪ್ರಕರಣ (12) ರಲ್ಲಿ ನಿಗದಿಪಡಿಸಿರುವ ಅಂಶಗಳನ್ನು ಪರಿಗಣಿಸಿ ಪಟ್ಟಣದ ಮುಂದಿನ ಬೆಳವಣಿಗೆಗಾಗಿ ವಿವಿಧ ಉಪಯೋಗಗಳಿಗಾಗಿ ಭೂಮಿಯನ್ನು ಕಾಯ್ದಿರಿಸಿ ಸಮಗ್ರಾಭಿವೃದ್ಧಿ ಯೋಜನೆಯನ್ನು ರೂಪಿಸಲಾಗಿದೆ.

ಶಿರಾ ಪಟ್ಟಣದ ಸ್ಥಳೀಯ ಯೋಜನಾ ಪ್ರಾಧಿಕಾರವು ಕೋರಿರುವಂತೆ, ಯೋಜನಾ ಪ್ರಾಧಿಕಾರವು ರೂಪಿಸಿದ ಸಮಗ್ರಾಭಿವೃದ್ಧಿ ಯೋಜನೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಪ್ರಕರಣ 13(3) ರನ್ವಯ, ಸರ್ಕಾರದ ಅಂತಿಮ ಅನುಮೋದನೆ ನೀಡಲು ಕೋರಲಾಗಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ನಅಇ 140 ಬೆಂಅಪ್ರಾ, 2004, ಬೆಂಗಳೂರು, ದಿ:26-3-05

ಪ್ರಸ್ತಾವನೆಯಲ್ಲಿ ಮೇಲೆ ವಿವರಿಸಿರುವಂತೆ ತುಮಕೂರು ಜಿಲ್ಲೆ, ಶಿರಾ ಪಟ್ಟಣದ ಸಮಗ್ರಾಭಿವೃದ್ಧಿ, ಯೋಜನಾ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಪ್ರಕರಣ 13(3) ರನ್ವಯ ಸರ್ಕಾರವು ಅಂತಿಮ ಅನುಮೋದನೆ ನೀಡಿದೆ.

ಈ ಸಂಬಂಧ, ಶಿರಾ ಪಟ್ಟಣದ ಸಮಗ್ರಾಭಿವೃದ್ಧಿ ಯೋಜನೆ ಅನ್ವಯ, ಅನುಮೋದನೆ ನೀಡಿದ ಕುರಿತಾಗಿ ವರದಿ ಹಾಗೂ ನಕ್ಷೆಗಳ ಮೇಲೆ ಸರ್ಕಾರದ ಮುದ್ರೆಯನ್ನು ಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ,
ಮತ್ತು ಅವರ ಹೆಸರಿನಲ್ಲಿ,

(ವಿ.ಶ್ರೀಧರಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

ಗೆ:

1. ನಿರ್ದೇಶಕರು, ನಗರ ಯೋಜನಾ ಇಲಾಖೆ, ಬೆಂಗಳೂರು
2. ಮುಖ್ಯಾಧಿಕಾರಿ, ಪುರಸಭೆ, ಶಿರಾ, ನಗರ ಯೋಜನಾ ಪ್ರಾಧಿಕಾರ, ಬೆಂಗಳೂರು
3. ಸಹಾಯಕ ನಿರ್ದೇಶಕರು, ನಗರ ಯೋಜನಾ ಇಲಾಖೆ, ತುಮಕೂರು.
4. ಮಾನ್ಯ ಮುಖ್ಯಮಂತ್ರಿಗಳ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು
5. ವಾರದ ರಾಜ್ಯಪತ್ರ
6. ಶಾಖಾ ರಕ್ಷಾ ಕಡತ : ಹೆಚ್ಚುವರಿ ಪ್ರತಿಗಳು.